# ಎಂವಿಸಿ ಸಂಖ್ಯೆಃ 122/2024 ಪಿಡಬ್ಲ್ಯೂಃ1

## ದಿನಾಂಕಃ 30-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.

## ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ಅಪಘಾತಕ್ಕೆ ಸಂಬಂಧಿಸಿದ ಪ್ರ.ವ. ವರದಿಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.
2. ದೂರಿನ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.
3. ಸ್ಥಳ ಪಂಚನಾಮೆಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಕಚ್ಚಾ ನಕ್ಷೆಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.
4. ವಾಹನದ ಜಪ್ತು ಪಂಚನಾಮೆಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.
5. ಐಎಂವಿ ವರದಿಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.
6. ಮತ್ತೊಂದು ಐಎಂವಿ ವರದಿಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.
7. ಶವ ತನಿಖಾ ವರದಿಯನ್ನು ನಿಪಿ-7 ಎಂದು ಗುರುತಿಸಲಾಯಿತು.
8. ಶವ ಪರೀಕ್ಷಾ ವರದಿಯನ್ನು ನಿಪಿ-8 ಎಂದು ಗುರುತಿಸಲಾಯಿತು.
9. ಅಂತಿಮ ವರದಿ ಮತ್ತು ಅದರ ಜೊತೆ ಲಗತ್ತಿತ ಇತರ ದಾಖಲೆಗಳನ್ನು ಒಟ್ಟಾಗಿ ನಿಪಿ-9 ಎಂದು ಗುರುತಿಸಲಾಯಿತು.
10. ವಾಹನ ಬಿಡಿಸಿಕೊಂಡ ಬಗ್ಗೆ ಕೊಟ್ಟ 3 ಇಂಡೆಮ್ನಿಟಿ ಬಾಂಡ್‌ಗಳನ್ನು ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಯಿತು.
11. ಎರಡೂ ವಾಹನ ಮಾಲೀಕರಿಗೆ ಕಲಂ 133 ಅಡಿಯಲ್ಲಿ ಕೊಟ್ಟ ನೋಟೀಸಿನ ಪ್ರತಿಗಳನ್ನು ಕ್ರಮವಾಗಿ ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು.
12. ಸದ್ರಿ ನೋಟೀಸಿಗೆ ಕೊಟ್ಟ ಪ್ರತ್ಯುತ್ತರಗಳನ್ನು ಕ್ರಮವಾಗಿ ನಿಪಿ-13, 14 ಎಂದು ಗುರುತಿಸಲಾಯಿತು.
13. ಉಮಾ ಇವರ ಹೇಳಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು.

14. ನಾಗರಾಜ ಈತನ ಹೇಳಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು.

15. ನಾಗರಾಜ ತಂದೆ ಲೋಕೇಶಪ್ಪ ಈತನ ಹೇಳಿಕೆಯನ್ನು ನಿಪಿ-17 ಎಂದು ಗುರುತಿಸಲಾಯಿತು.

16. ಈರಪ್ಪ ಈತನ ಹೇಳಿಕೆಯನ್ನು ನಿಪಿ-18 ಎಂದು ಗುರುತಿಸಲಾಯಿತು.

17. ತಾತ್ಕಾಲಿಕ ರಾಷ್ಟ್ರೀಯ ಶಿಶಿಕ್ಷು ಪ್ರಮಾಣ ಪತ್ರವನ್ನು ನಿಪಿ-19 ಎಂದು ಗುರುತಿಸಲಾಯಿತು.

18. ತಾತ್ಕಾಲಿಕ ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರವನ್ನು ನಿಪಿ-20 ಎಂದು ಗುರುತಿಸಲಾಯಿತು.

19. ಶಿಶಿಕ್ಷುವಿನ ಅಂಕಪಟ್ಟಿಯನ್ನು ನಿಪಿ-21 ಎಂದು ಗುರುತಿಸಲಾಯಿತು.

20. ಎಸ್‌ಎಸ್‌ಎಲ್‌ಸಿ ಮಾರ್ಕ್ಸ್‌ಕಾರ್ಡನ್ನು ನಿಪಿ-22 ಎಂದು ಗುರುತಿಸಲಾಯಿತು.

21. ನನ್ನ ಮೂಲ ಆಧಾರ ಕಾರ್ಡನ್ನು ನಿಪಿ-23 ಎಂದು ಗುರುತಿಸಲಾಯಿತು.

22. ಕುಟುಂಬ ಪಡಿತರ ಚೀಟಿಯನ್ನು ನಿಪಿ-24 ಎಂದು ಗುರುತಿಸಲಾಯಿತು.

23. ಪಾನ್ ಕಾರ್ಡನ್ನು ನಿಪಿ-25 ಎಂದು ಗುರುತಿಸಲಾಯಿತು.

24. ನನ್ನ ಮೂಲ ಬ್ಯಾಂಕ್ ಪಾಸ್ ಪುಸ್ತಕವನ್ನು ನಿಪಿ-26 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ</u>**

ದೂರುದಾರ ನನ್ನ ಮಗಳ ಗಂಡ. ನನ್ನ ಮಗ ತನ್ನ ದ್ವಿಚಕ್ರ ವಾಹನವನ್ನು ಜೋರಾಗಿ ನಡೆಸಿಕೊಂಡು ಹೋಗಿ ಮುಂದೆ ಹೋಗುತ್ತಿದ್ದ ಟ್ರ್ಯಾಕ್ಟರ್ ನ ಟ್ರೈಲರ್ ಗೆ ಡಿಕ್ಕಿಪಡಿಸಿ ಅಪಘಾತಪಡಿಸಿಕೊಂಡಿರುತ್ತಾರೆ ಎಂದರೆ ನಿಜ. ಸದ್ರಿ ಮೋಟಾರ್ ಸೈಕಲ್ ಯಾವುದಕ್ಕೆ ಹೋಗಿ ಹೊಡೆಯಿತು ಎಂದು ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಪ್ರಮಾಣ ಪತ್ರದಲ್ಲಿ ದ್ವಿಚಕ್ರ ವಾಹನ ಟ್ರ್ಯಾಕ್ಟರ್ ನ ಟ್ರೈಲರನ ಹಿಂಭಾಗಕ್ಕೆ ಗುದ್ದಿ ಅಪಘಾತಪಡಿಸಲಾಗಿದೆ ಎಂದು ಬರೆಯಲಾಗಿದೆ ಎಂದರೆ ನಿಜ. ನನ್ನ ಮಗ ಮದ್ಯಪಾನ ಮಾಡಿ ತನ್ನ ಮೋಟಾರ್ ಸೈಕಲ್ ಚಲಾಯಿಸುತ್ತಿದ್ದ ಕುಂಶಿ ಪೊಲೀಸ್ ತನಿಖಾಧಿಕಾರಿಗಳು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ ಅಲ್ಲ. ಅಪಘಾತ ಸಂಪೂರ್ಣವಾಗಿ ನನ್ನ ಮಗನ ತಪ್ಪಿನಿಂದ ಸಂಭವಿಸಿದ್ದರಿಂದ ಎದುರುದಾರ 1 ಮತ್ತು 2 ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ. ಸದ್ರಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಗೆ ವಿಮೆ ಇದ್ದರಿಂದ ಮತ್ತು ಟ್ರ್ಯಾಕ್ಟರ್ ಚಾಲಕನಿಗೆ ಚಾಲನಾ ಪ್ರಮಾಣ

ಪತ್ರ ಇದ್ದರಿಂದ ಪರಿಹಾರ ಕೊಡಲು ಎದುರುದಾರ ನಂಬ್ರ 3 ಇವರು ಬಾಧ್ಯಸ್ಥರು ಎಂದರೆ ಸರಿ ಅಲ್ಲ.

**<u>ಪಾಟೀ ಸವಾಲುಃ 3 ನೇ ಎದುರುದಾರ ಪರ ವಕೀಲರಿಂದ</u>**

ಅಪಘಾತ ಸಮಯದಲ್ಲಿ ನನ್ನ ಮಗ ಮೋಟಾರ್ ಸೈಕಲ್ ಓಡಿಸುತ್ತಿದ್ದ ಎಂದರೆ ನಿಜ. ಅದು ನನ್ನ ಹೆಸರಲ್ಲಿ ಇದೆ. ಸದ್ರಿ ಅಪಘಾತ ನನ್ನ ಮಗ ಸಾರಾಯಿ ಕುಡಿದು ವಾಹನ ಚಲಾಯಿಸಿದ್ದರಿಂದ ಆಗಿದೆ ಎಂದು ಅಂತಿಮ ವರದಿ ಆತನ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿ ಅಲ್ಲ. ಟ್ರ್ಯಾಕ್ಟರ್ ಮತ್ತು ಟ್ರೈಲರ್ ಯಾರದು ಎಂದು ನನಗೆ ಗೊತ್ತಿಲ್ಲ. 1 ನೇ ಎದುರುದಾರನ ಹೆಸರಿಗೆ ಟ್ರ್ಯಾಕ್ಟರ್ ಇದೆ ಎಂದರೆ ನಿಜ. ಸದ್ರಿ ಟ್ರ್ಯಾಕ್ಟರ್ ಗೆ ವಿಮೆ ಇರಲಿಲ್ಲ ಎಂದು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ ಅಲ್ಲ. ಅಪಘಾತದ ಸಮಯದಲ್ಲಿ ಸದ್ರಿ ಟ್ರ್ಯಾಕ್ಟರನ್ನು 1 ನೇ ಎದುರುದಾರ ಚಲಾಯಿಸುತ್ತಿದ್ದ ಎಂದರೆ ನಿಜ. ಟ್ರೈಲರ್ ವಿಮೆ 3 ನೇ ಎದುರುದಾರರ ಕಂಪನಿಯಲ್ಲಿ ವಿಮೆ ಹೊಂದಿದೆ ಎಂದರೆ ನಿಜ. ಸದ್ರಿ ನನ್ನ ಮಗ ಅತಿ ವೇಗವಾಗಿ ದುಡುಕುತನದಿಂದ ಚಲಾಯಿಸಿಕೊಂಡು ಬಂದು ಅಪಘಾತಪಡಿಸಿದ್ದರಿಂದ ಸದ್ರಿ ಅಪಘಾತ ಆಗಿದೆ ಎಂದರೆ ಸರಿ ಅಲ್ಲ. ಸದ್ರಿ ದ್ವಿಚಕ್ರ ವಾಹನ ಟ್ರ್ಯಾಕ್ಟರ್ ಗೆ ಹೋಗಿ ಹೊಡೆದಿದ್ದು ಹೊರತು ಟ್ರೈಲರ್ ಗೆ ಅಲ್ಲ ಎಂದರೆ ಸರಿ ಅಲ್ಲ. ಅಪಘಾತ ನನ್ನ ಮಗನ ತಪ್ಪಿನಿಂದ ಮತ್ತು 1 ನೇ ಎದುರುದಾರನ ತಪ್ಪಿನಿಂದ ಸಂಭವಿಸಿದ್ದರಿಂದ 3 ನೇ ಎದುರುದಾರ ಯಾವುದೇ ರೀತಿಯ ವಿಮೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ.

ನನ್ನ ಮಗ ಕರೋನಾ ಖಾಯಿಲೆಗಿಂತ ಪೂರ್ವದಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ. ಅಪಘಾತ ಸಮಯದಲ್ಲಿ ಶಿವಮೊಗ್ಗದ ಆಕಾಶ್ ಇನ್ ಹೊಟೇಲ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ. ನನ್ನ ಮಗನಿಗೆ 35 ಸಾವಿರ ಸಂಬಳ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ. ನನ್ನ ಗಂಡ ಇಲ್ಲ. 2 ನೇ ಅರ್ಜಿದಾರಳು ಕೂಲಿ ಕೆಲಸ ಮಾಡುತ್ತಾಳೆ. ಅವಳ ಮದುವೆ ಆಗಿದೆ. ನಾನು ಯಾವುದೇ ಕೆಲಸ ಮಾಡುವುದಿಲ್ಲ. ನಾನು ಮತ್ತು ನನ್ನ ಮಗಳು ಇಬ್ಬರೂ ದುಡಿದು ಬದುಕುತ್ತಿದ್ದು ಮೃತನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿ ಅಲ್ಲ. ಶವ ಸಂಸ್ಕಾರಕ್ಕೆ 50 ಸಾವಿರ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಸದ್ರಿ 1 ನೇ ಎದುರುದಾರ ಮತ್ತು ನನ್ನ ಮಗನ ತಪ್ಪಿನಿಂದ ಅಪಘಾತ

ಸಂಭವಿಸಿದ್ದರಿಂದ 3 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

**(ಓ.ಹೇ.ಕೇ.ಸ.)**

2 **ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ